## ಕರ್ನಾಟಕ ಅರಣ್ಯ ಇಲಾಖೆ

ಸಂಖ್ಯೆ: ಬಿ5/ಕೆಪಿಟಿ/ಸಿಆರ್-70/2015-16

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು) ರವರ ಕಛೇರಿ,
ಅರಣ್ಯ ಭವನ, ಮಲ್ಲೇಶ್ವರಂ,
ಬೆಂಗಳೂರು-03, ದಿನಾಂಕ: 20.09.2017

## ಸುತ್ತೋಲೆ

ವಿಷಯ: Ease of Doing Business-Implementation of Business Reform Action Plan 2017-reg.

ಉಲ್ಲೇಖ: ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕ ಇಲಾಖೆ, ಡಾ// ಬಿ.ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು ರವರ ಪತ್ರ ಸಂಖ್ಯೆ: KUM/AD1/EODB/BRAP-2017/390/2017-18 ದಿನಾಂಕ: 03.05.2017.

ಪ್ರಸ್ತಾವನೆ:

Ease of Doing Business-Implementation of Business Reform Action Plan 2017 ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರದ ಕಾರ್ಯಕ್ರಮವಾಗಿರುವುದರಿಂದ ಉಲ್ಲೇಖಿತ ಸರ್ಕಾರದ ಪತ್ರದಲ್ಲಿ ಪ್ರಸ್ತಾಪಿಸಿರುವ ಕ್ರಿಯಾ ಅಂಶಗಳನ್ನು ಅನುಷ್ಠಾನ ಮಾಡುವ ಕುರಿತು ತಿಳಿಸಲಾಗಿದೆ. ಇದರ ಅನುಗುಣವಾಗಿ ಇಲಾಖೆಯ ವೆಬ್‌ಜಾಲ http//.aranya.gov.in ರಲ್ಲಿ, ಖಾಸಗಿ ಜಮೀನಿನಲ್ಲಿ ಮರಗಳ ಕತರಾವಣೆ ಹಾಗೂ ಸಾಗಾಣಿಕೆ ಮಾಡಲು ನೇರವಾಗಿ (online) ಮೂಲಕ ಅರ್ಜಿ ಸಲ್ಲಿಸುವ ತಂತ್ರಾಂಶಗಳನ್ನು ಅಭಿವೃದ್ದಿ ಪಡಿಸಿ ಅಳವಡಿಸಲಾಗಿದೆ. ಸದರಿ ತಂತ್ರಾಂಶದಲ್ಲಿ ವಿವಿಧ ಹಂತಗಳಲ್ಲಿ ಅಧಿಕಾರಿಗಳು ಕ್ಷೇತ್ರ ತಪಾಸಣೆಯನ್ನು ಕೈಗೊಳ್ಳಲು ಸೂಚಿಸಲಾಗಿದೆ, ಮತ್ತು ಸದರಿ ಕ್ಷೇತ್ರ ತಪಾಸಣೆ ವರದಿಯನ್ನು ನಿಗದಿತ ಅವದಿಯಲ್ಲಿ ತಂತ್ರಾಂಶದಲ್ಲಿ ಅಳವಡಿಸಲು ತಿಳಿಸಲಾಗಿದೆ. ಆದುದರಿಂದ, ಸಾರ್ವಜನಿಕರು ಕ್ಷೇತ್ರ ತಪಾಸಣಾ ವರದಿಗಳನ್ನು ನೋಡಲು ಮತ್ತು ಪ್ರತಿಗಳನ್ನು ಪಡೆದುಕೊಳ್ಳಲು ಅವಕಾಶವನ್ನು ಕಲ್ಪಿಸಬೇಕಿರುತ್ತದೆ. ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ, 1976, ಸೆಕ್ಷನ್ 8(3)ರಲ್ಲಿ ಕಲ್ಪಿಸಲಾಗಿರುವ ಅವಕಾಶಗಳಂತೆ ಕ್ಷೇತ್ರ ತಪಾಸಣೆ ಮಾಡುವ ಅಧಿಕಾರಿಗಳು ಸದರಿ ತಂತ್ರಾಂಶದಲ್ಲಿ ಕ್ಷೇತ್ರ ತಪಾಸಣೆ ವರದಿಯನ್ನು ತಪಾಸಣೆ ಮಾಡಿದ ನಲವತ್ತೆಂಟು (48) ಗಂಟೆಯೊಳಗೆ, ತಂತ್ರಾಂಶದಲ್ಲಿ ಅಳವಡಿಸಲು ಈ ಕೆಳಕಂಡ ಆದೇಶ.

## ಆ ದೇ ಶ

ಪ್ರಸ್ಥಾವನೆಯಲ್ಲಿ ವಿವರಿಸಿರುವಂತೆ ಇಲಾಖೆಯ ವೆಬ್‌ಜಾಲ http//.aranya.gov.in ರಲ್ಲಿ ಖಾಸಗಿ ಜಮೀನಿನಲ್ಲಿ ಮರಗಳ ಕತರಾವಣೆ ಹಾಗೂ ಸಾಗಾಣಿಕೆ ಮಾಡಲು ನೇರವಾಗಿ (online) ಮೂಲಕ ಅರ್ಜಿ

ಸಲ್ಲಿಸುವ ತಂತ್ರಾಂಶಗಳನ್ನು ಅಭಿವೃದ್ಧಿ ಪಡಿಸಿ ಅಳವಡಿಸಲಾಗಿದೆ. ಕ್ಷೇತ್ರ ತಪಾಸಣೆ ವರದಿಯನ್ನು ನಿಗದಿತ ಅವದಿಯಲ್ಲಿ ತಂತ್ರಾಂಶದಲ್ಲಿ ಅಳವಡಿಸಲು ತಿಳಿಸಲಾಗಿದ್ದು, ಕರ್ನಾಟಕ ವೃಕ್ಷ ಸಂರಕ್ಷಣಾ ಕಾಯಿದೆ, 1976, ಸೆಕ್ಷನ್ 8(3) ರಲ್ಲಿ ಕಲ್ಪಿಸಲಾಗಿರುವ ಅವಕಾಶಗಳಂತೆ ಕ್ಷೇತ್ರ ತಪಾಸಣೆ ಮಾಡುವ ಅಧಿಕಾರಿಗಳು ಕ್ಷೇತ್ರ ತಪಾಸಣಾ ವರದಿಗಳನ್ನು ತಪಾಸಣೆ ಮುಗಿದ ನಲವತ್ತೆಂಟು (48) ಗಂಟೆಗಳ ಅವಧಿಯೊಳಗೆ ಸದರಿ ತಂತ್ರಾಂಶದಲ್ಲಿ ಅಳವಡಿಸಲು (upload) ಮಾಡಲು ಕ್ರಮ ಕೈಗೊಳ್ಳುವಂತೆ ಆದೇಶಿಸಲಾಗಿದೆ.

(ಕಿಶನ್ ಸಿಂಗ್ ಸುಗಾರ, ಭಾ.ಅ.ಸೇ.)
ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ
(ಅರಣ್ಯ ಪಡೆ ಮುಖ್ಯಸ್ಥರು)

**ಪ್ರತಿಯನ್ನು**

1. ಗೌರವಗಳೊಂದಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
2. ಗೌರವಗಳೊಂದಿಗೆ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕ ಇಲಾಖೆ, ಬೆಂಗಳೂರು ರವರ ಮಾಹಿತಿಗಾಗಿ ಸಲ್ಲಿಸಲಾಗಿದೆ.
3. ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಅರಣ್ಯ ಸಂಪನ್ಮೂಲ ನಿರ್ವಹಣೆ), ಅರಣ್ಯ ಭವನ, ಬೆಂಗಳೂರು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.
4. ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಮಾಹಿತಿ ಸಂವಹನ ಮತ್ತು ತಂತ್ರಜ್ಞಾನ (ಐ.ಸಿ.ಟಿ), ಬೆಂಗಳೂರು ಇವರ ಮಾಹಿತಿಗಾಗಿ ಹಾಗೂ ಕ್ಷೇತ್ರ ತಪಾಸಣೆ ಮಾಡುವ ಅಧಿಕಾರಿಗಳು ಕ್ಷೇತ್ರ ತಪಾಸಣಾ ವರದಿಗಳನ್ನು ನಿಗದಿತ ಅವದಿಯಲ್ಲಿ ತಂತ್ರಾಂಶಕ್ಕೆ ರವಾನಿಸುತ್ತಿರುವ ಕುರಿತು ಖಚಿತ ಪಡಿಸಿಕೊಳ್ಳುವುದು.
5. ಎಲ್ಲಾ ಪ್ರಾದೇಶಿಕ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ ಕಳುಹಿಸಲಾಗಿದೆ.
6. ಎಲ್ಲಾ ಪ್ರಾದೇಶಿಕ ವಿಭಾಗಗಳ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಮಾಹಿತಿ ಹಾಗೂ ನಿಮ್ಮ ಅಧಿನದಲ್ಲಿ ಬರುವ ಅಧಿಕಾರಿಗಳ ಮಾಹಿತಿಗೆ ಕಳುಹಿಸಿ ಸುತ್ತೋಲೆಯಲ್ಲಿ ತಿಳಿಸಿರುವ ಅಂಶಗಳ ಕುರಿತು ಕ್ರಮ ಕೈಗೊಳ್ಳುತ್ತಿರುವ ಬಗ್ಗೆ ಪರಿಶೀಲಿಸುವುದು ಹಾಗೂ ಯಾವುದೆ ಅನಗತ್ಯ ಗೊಂದಲಗಳು ಸೃಷ್ಟಿಯಾಗದಂತೆ ಎಚ್ಚರಿಕೆ ವಹಿಸುವುದು.
7. ಕಛೇರಿ ಕಡತಕ್ಕೆ.